# ದಿನಂಪ್ರತಿ  ಅಪರಾಧಗಳ ಮಾಹಿತಿ ದಿನಾಂಕ: 07-08-2022

### ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 56/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 06/08/2022 ರಂದು ಮುಂಜಾನೆ 1145  ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಸಿಕಿಂದ್ರಾಪೂರ ಗ್ರಾಮದ ಹನುಮಾನ ಮಂದಿರದ ಹತ್ತಿರ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಮಟ್ಕಾ ಚೀಟಿ ಬರೆದುಕೊಳ್ಳುತಿದ್ದಾನೆ ಅಂತಾ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿ ಮತ್ತು ಪಂಚರೊಂದಿಗೆ  ಸಿಕಿಂದ್ರಾಪೂರ ಗ್ರಾಮಕ್ಕೆ ಹೋಗಿ ಹನುಮಾನ ಮಂದಿರದ  ಹತ್ತಿರ ಹೋಗಿ ಸ್ವಲ್ಪ ಅಂತರದಲ್ಲಿ ಮರೆಯಾಗಿ ನಿಂತು ನೋಡಲಾಗಿ ಅಲ್ಲಿ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ನಿಂತು ಸಾರ್ವಜನಿಕರಿಗೆ ಮಟ್ಕಾ ನಸೀಬಿನ ಜೂಜಾಟ 01 ರೂ. ಗೆ 80 ಅಂತಲೂ ಮತ್ತು 10 ರೂ.ಗೆ 800 ರೂ. ಅಂತಾ ಹೇಳುತ್ತಾ ಸಾರ್ವಜನಿಕರಿಂದ ದುಡ್ಡು ಪಡೆದುಕೊಳ್ಳುತ್ತಾ ಅವರಿಗೆ ಮಟ್ಕಾ ಚೀಟಿ ಬರೆದುಕೊಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ಅವನ ಮೇಲೆ ದಾಳಿ  ಮಾಡಿ ಹಿಡಿದು ಹೆಸರು ವಿಳಾಸ ವಿಚಾರಿಸಲಾಗಿ ಅವನು ತನ್ನ ಹೆಸರು ಎಮ್.ಡಿ ಅಲಿಂ ತಂದೆ ಎಮ್ ಡಿ ಮಸ್ತಾನ ದರವೇಜ ವಯ- 38 ಜಾ।। ಮುಸ್ಲಿಂ ಉ।। ಕೂಲಿ ಸಾ।। ಸಿಕಿಂದ್ರಾಪೂರ ಅಂತ ತಿಳಿಸಿರುತ್ತಾನೆ. ನಂತರ ಆತನ ಅಂಗ ಝಡ್ತಿ ಮಾಡಲಾಗಿ ಅವನ ಹತ್ತಿರ 500/- ರೂಪಾಯಿಯ 3 ನೋಟು ಮತ್ತು 100/- ರೂಪಾಯಿಯ 3 ನೋಟು ಮತ್ತು 10 ರೂಪಾಯಿಯ 6 ನೋಟು ಒಟ್ಟು ರೂ. 1860/ -ನಗದು ಹಣ ಇದ್ದು ಮತ್ತು 1 ಮಟ್ಕಾ ಚೀಟಿ ಹಾಗೂ ಒಂದು ಬಾಲ್ ಪೆನ್ ಸಿಕ್ಕಿರುತ್ತವೆ. ನಗದು ಹಣ 1860/-- ರೂ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 135/2022 ಕಲಂ 379 ಐಪಿಸಿ :-

ದಿನಾಂಕ 06/08/2022 ರಂದು 1745 ಗಂಟೆಗೆ  ಫಿರ್ಯಾದುದಾರರಾದ  ಶ್ರೀ. ಶೇಷಪ್ಪಾ ತಂದೆ ಹಾಲಪ್ಪಾ ಪಂಚಾಳ ವಯ:28 ವರ್ಷ ಜಾತಿ: ಪಾಂಚಾಳ ಉ: ಬಡಿಗೆತನ ಕೆಲಸ  ಸಾ/ಶಾಮತಬಾದ ತಾ/ ಚಿಟಗುಪ್ಪಾ ನಿವಾಸಿ ರವರು ನೀಡಿದ ದೂರಿನ ಸಾರಾಂಶವೆನೆಂದರೆ ಇವರು ಒಂದು ಹೀರೊ ಪ್ಯಾಶನ ಪ್ರೋ  ಮೊಟರ ಸೈಕಲ ನಂ. ಕೆಎ33 ಎಕ್ಸ 6810  ನೇದನ್ನು 2018 ಸಾಲೀನಲ್ಲಿ ಖರೀದಿಸಿದ್ದು, ಅದು ಸಿದ್ದಣ್ಣಾ ತಂದೆ ಮಲ್ಲಪ್ಪಾ ವಟ್ಟರ ಮೇಟಿ ಸಾ/ಗುಂಡಳ್ಳಿ ಜಿಲ್ಲಾ/ಯಾದಗಿರ ಹೆಸರಿನಲ್ಲಿ ಇದ್ದು, ಅದನ್ನು  ಸುಮಾರು ಒಂದುವರೆ ತಿಂಗಳ ಹಿಂದೆ ಖರೀದಿ ಮಾಡಿದ್ದು ಅದನ್ನು ತನ್ನ ಹೆಸರಿಗೆ ಇನ್ನೂ ನೊಂದಣಿ ಮಾಡಿಕೊಂಡಿರುವುದಿಲ್ಲಾ. ಹೀಗಿರುವಾಗ ದಿನಾಂಕ 07/07/2022 ರಂದು ಸಾಯಂಕಾಲ 8:00 ಪಿ.ಎಮ್. ಗಂಟೆಗೆ ನನ್ನ ಮೊಟರ ಸೈಕಲನ್ನು  ಬೀದರ ನಗರದ ಸರ್ಕಾರಿ ಆಸ್ಪತ್ರೆಯ ಮುಂದೆ ಪ್ರಭು ಮೇಡಿಕಲ್ ಎದುರಿಗೆ ನಿಲ್ಲಿಸಿ ನಮ್ಮ ಅತ್ತಿಗೆಗೆ ಹೇರಿಗೆ ಆಗಿದ್ದರಿಂದ ಆಸ್ಪತ್ರೆಯಲ್ಲಿ  ಹೋಗಿ ಅವರಿಗೆ ಊಟ ನೀಡಿ 11:00 ಪಿ.ಎಮ್. ಗಂಟೆಯ ಸಮಯಕ್ಕೆ ಮರಳಿ ಆಸ್ಪತ್ರೆಯಿಂದ ಹೊರಗೆ ಬಂದು ಪ್ರಭು ಮೇಡಿಕಲ್ ಎದುರಿಗೆ ಬಂದು ನೋಡಿದಾಗ  ಮೊಟರ ಸೈಕಲ  ಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ. ಯಾರೋ ಕಳ್ಳರು ಕಳವು ಮಾಡಿಕೊಂಡು ಹೊಗಿರುತ್ತಾರೆ ಮೋ.ಸೈ. ವಿವರ  ಹೀರೊ  ಪ್ಯಾಶನ ಪ್ರೋ ಮೊಟರ ಸೈಕಲ ನಂ. ಕೆಎ33ಎಕ್ಸ-6810 ಚಾ.ನಂ MBLHAR185JHL29465 ಇಂಜಿನ ನಂ. HA10ACJHL64491  ಅಂದಾಜು ಕಿಮ್ಮತ್ತು ರೂ- 45,000/-ರೂ ಆಗಿರುತ್ತದೆ.  ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 126/ 2022 ಕಲಂ 3, 7 ಇ.ಸಿ. ಕಾಯ್ದೆ :-

ದಿನಾಂಕ 06/08/2022 ರಂದು 18:00 ಗಂಟೆಗೆ ಶ್ರೀಮತಿ ಬಿಂದುಕುಮಾರಿ ಆಹಾರ ನೀರಿಕ್ಷಕರು ತಹಸೀಲ ಕಚೇರಿ ಹುಮನಾಬಾದ ರವರು ಠಾಣೆಗೆ ಹಾಜರಾಗಿ  ನೀಡಿದ ದೂರಿನ ಸಾರಂಶವೆನೆಂದರೆ. ಹುಮನಾಬಾದ ಪಟ್ಟಣದ ಎನ್.ಹೆಚ್ 65 ರಸ್ತೆಯ ಪಕ್ಕದಲ್ಲಿ ಕಲ್ಲೂರ ರಸ್ತೆ ಕಡೆ ಹೋಗುವ ಸರ್ವಿಸ್ ರೋಡಿನ ಮೇಲೆ ಒಂದು ಲಾರಿ ನಂಬರ ಟಿ.ಎಸ್ 12 ಯು.ಡಿ 0466 ನೇದರಲ್ಲಿ ಸರಕಾರದಿಂದ ಸಾರ್ವಜನಿಕರಿಗೆ ವಿತರಿಸುವ ಅಕ್ಕಿ ಸಂಗ್ರಹಿಸಿ, ಅಕ್ರಮವಾಗಿ ಸಾಗಾಟ ಮಾಡುವ ಕುರಿತು ನಿಲ್ಲಿಸಿರುತ್ತಾರೆ ಅಂತ ಭಾತ್ಮಿ ಮೇರೆಗೆ ಆಹಾರ ನಿರೀಕ್ಷಕರು ಪಂಚರ ಸಮಕ್ಷಮದಲ್ಲಿ ಪೊಲೀಸರ ಸಹಾಯದಿಂದ ಸದರಿ ಲಾರಿಯ ಮೇಲೆ 1600 ಗಂಟೆಗೆ ದಾಳಿ ಮಾಡಿ ಅಲ್ಲಿ ಹಾಜರಿದ್ದ ಲಾರಿ ಚಾಲಕನಿಗೆ ಹಿಡಿದು ವಿಚಾರಣೆ

ಮಾಡಲು ಆತನು ತನ್ನ ಹೆಸರು ಜಗದೀಶ ತಂದೆ ರಾಮಲು ವಯ:34 ವರ್ಷ ಜಾ:ಮುದ್ದರಾಜ (ಬಿ.ಸಿ) ಉ:ಲಾರಿ ಡ್ರೈವರ ಸಾ:ನೇಹರು ಕಾಲೋನಿ ಶಾದನಗರ ತಾ:ಫಾರುಕ್ ನಗರ ಜಿ:ಮೆಹೆಬೂಬ ನಗರ ಆಂದ್ರ ಪ್ರದೇಶ ಅಂತ ತಿಳಿಸಿದ್ದು, ಸದರಿ ಲಾರಿಯಲ್ಲಿ ಸರ್ಕಾರದಿಂದ ಸಾರ್ವಜನಿಕರಿಗೆ ವಿತರಣೆಯಾಗಿರುವ ಪಿಡಿಎಸ್ ಅಕ್ಕಿ ಇದ್ದು, ಇವು ನಮ್ಮ ಮಾಲಿಕರಾದ ಮಹಮ್ಮದ ಮೋಸೀನ ಖಾನ ಇವರು ಹಳ್ಳಿ ಜನರಿಂದ ಖರೀದಿ ಮಾಡಿ ಅಕ್ರಮವಾಗಿ ಸಂಗ್ರಹಿಸಿದ್ದು, ನನಗೆ ಸದರಿ ಅಕ್ಕಿಯನ್ನು ಮುಂಬೈಗೆ ಸಾಗಾಟ ಮಾಡಲು ತಿಳಿಸಿದ ಮೆರೆಗೆ ನಾನು ಸಾಗಾಟ ಮಾಡುವ ಕುರಿತು ಲಾರಿಯನ್ನು ಇಲ್ಲಿ ನಿಲ್ಲಿಸಿರುತ್ತೇನೆ ಅಂತಾ ತಿಳಿಸಿರುತ್ತಾನೆ. ನಂತರ ಆಹಾರ ನೀರಿಕ್ಷಕರು ಆತನಿಗೆ ಸದರಿ ಅಕ್ಕಿಯನ್ನು ಖರೀದಿ ಮಾಡಲು ಅಥವಾ ಸಾಗಾಟ ಮಾಡಲು ನಿಮ್ಮ ಹತ್ತೀರ ಪರವಾನಿಗೆ ಇದೆಯಾ ಅಂತಾ ವಿಚಾರಿಸಲು ಲಾರಿ ಚಾಲಕನು ನಮ್ಮ ಹತ್ತೀರ ಯಾವುದೇ ರೀತಿಯ ಪರಾನಿಗೆ ಇರುವುದಿಲ್ಲ ಅಂತಾ ತಿಳಿಸಿರುತ್ತಾನೆ. ಪಂಚರ ಸಮಕ್ಷಮದಲ್ಲಿ ಲಾರಿಯಲ್ಲಿ ಇದ್ದ ಮಾಲು ಪರೀಶಿಲಿಸಿ ನೋಡಲು ಸದರಿ ಲಾರಿಯಲ್ಲಿ ಅಂದಾಜು 50 ಕೆ.ಜಿ ಯುಳ್ಳ 348 ಒಟ್ಟು 17 ಟನ್ 4 ಕ್ವಿಂಟಲ ಚೀಲಗಳು ಇದ್ದು, ಆಹಾರ ನೀರಿಕ್ಷರು ಚೇಕ್ ಮಾಡಿ ನೋಡಲು ಇವು ಪಿ.ಡಿ.ಎಸ ಅಕ್ಕಿ ಇರುತ್ತವೆ ಅಂತಾ ತಿಳಿಸಿ ಅಕ್ಕಿಯ ಅಂದಾಜು ಕಿಮ್ಮತ್ತು 4,00,200/- ರೂಪಾಯಿ ಅಂತಾ ತಿಳಿಸಿರುತ್ತಾರೆ. ಹಾಗು ಲಾರಿಯನ್ನು ಪರಿಶೀಲಿಸಿ ನೊಡಲು ಲಾರಿ ನಂಬರ ಟಿ.ಎಸ್ 12 ಯು.ಡಿ 0466 ಇದ್ದು ಅದರ ಅಂದಾಜು ಕಿಮತ್ತು 7,00,000/- ರೂಪಾಯಿ ಇರುತ್ತದೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.